ಮಾಡುವಂತಹ ಗಾಜಿನ ಅರಮನೆ ಮಧುಬನವಾಗಿದೆ. ಒಂದು ಮಾತಿನ ಖುಷಿಯಂತೂ ಇದೆ, ಈಗ ಕಾಗದದಲ್ಲಿ ಬರೆದಿರುವುದನ್ನು ಕರ್ಮದಲ್ಲಿ ತರಲೇಬೇಕು. ಸರಿಯೇ! ಒಳ್ಳೆಯದು. ಶುಭಾಶಯಗಳು.

ಈಗ ಒಂದು ವೇಳೆ ನಿಮ್ಮೆಲ್ಲರಿಗೂ ಇದ್ದಕ್ಕಿದ್ದಂತೆ ಈಗ ಅಶರೀರಿಯಾಗಿ ಬಿಡಿ ಎಂದು ನಿರ್ದೇಶನ ಕೊಟ್ಟರೆ ಆಗಲು ಸಾಧ್ಯವೇ ಅಥವಾ ಏರುಪೇರಿನಲ್ಲಿ ಬರುತ್ತೀರಾ? ಏಕೆ? ಅಂತಿಮ ಸಮಯದಲ್ಲಿ ಈ ಅಭ್ಯಾಸವೇ ಪಾಸ್ ವಿತ್ ಹಾನರ್ ಮಾಡುವುದು. ಈಗ ಬಾಪ್ದಾದಾರವರು ಹೇಳುತ್ತಾರೆ ಒಂದು ಸೆಕೆಂಡಿನಲ್ಲಿ ಎಲ್ಲಾ ಮಾತುಗಳನ್ನು ಬದಿಗೆ ಸರಿಸಿ ಅ ಶರೀರಿ ಭವ (ಡ್ರಿಲ್) ಒಳ್ಳೆಯದು.

ನಾಲ್ಕಾರು ಕಡೆಯ ಅತಿ ಶ್ರೇಷ್ಠ ಭಾಗ್ಯವಂತ, ಪರಮಾತ್ಮ ಪಾಲನೆಯ ಅಧಿಕಾರಿ ಆತ್ಮಗಳಿಗೆ, ಪರಮಾತ್ಮ ವಿದ್ಯೆಯ ಅಧಿಕಾರಿ, ಪರಮಾತ್ಮ ಸತ್ಗುರುವಿನ ವರದಾನಗಳ ಅಧಿಕಾರಿ, ಸದಾ ದೃಢತೆಯ ಮೂಲಕ ಸಫಲತೆಯ ಅಧಿಕಾರಿ, ಸದಾ ಅಖಂಡ ಯೋಗಿ, ಅಚಲ ಯೋಗಿ, ಸದಾ ವಿಶ್ವ ಪರಿವರ್ತನೆಯ ಜವಾಬ್ದಾರಿ ಹಾಗೂ ಕಿರೀಟ ದಾರಿ, ಸದಾ ಸರ್ವ ಪ್ರಾಪ್ತಿಗಳನ್ನು ಎಮರ್ಜ್ ರೂಪದಲ್ಲಿ ಅನುಭವ ಮಾಡುವಂತಹ ಇಂತಹ ವಿಶೇಷ ಆತ್ಮಗಳಿಗೆ ಬಾಪ್ದಾದಾರವರ ನೆನಪು ಪ್ರೀತಿ ಹಾಗೂ ನಮಸ್ತೆ.

ಈಗ ಮುಕ್ತಿ ವರ್ಷದಲ್ಲಿ ನಂಬರ್ ವನ್ ಮಧುಬನ ನಿವಾಸಿ. ಸರಿಯೇ? ಆಗಲು ಸಾಧ್ಯವೇ ಅಥವಾ ಕಷ್ಟ ಎನಿಸುತ್ತದೆ? (ಆಯಿತು ಪ್ರಭು) ಹಾಗಾದರೆ ಬಾಪ್ ದಾದಾರವರು ಮಧುಬನದವರಿಗೂ ಸಹ ಚಿನ್ನದ ಬ್ಯಾಡ್ಜ್ ಕೊಡುವರು. ಮಧುಬನದವರಿಗೆ ಬ್ಯಾಡ್ಜ್ ಕೊಡಬೇಕು ಮತ್ತು ಎಲ್ಲರಿಗೂ ಕೊಟ್ಟಿದ್ದೇವೆ ಮಧುಬನದವರಿಗೆ ಮುಕ್ತಿ ವರ್ಷದ ಬಹುಮಾನವನ್ನು ಕೊಡೋಣ. ಒಳ್ಳೆಯದು ನಿಮ್ಮೆಲ್ಲರಿಗೂ ಬ್ಯಾಡ್ಜ್ ಕೊಡುತ್ತೇವೆ. ಒಳ್ಳೆಯದು.

ವರದಾನ: ವರದಾನ: ಬ್ರಾಹ್ಮಣ ಜೀವನದಲ್ಲಿ ಒಬ್ಬ ತಂದೆಯನ್ನು ತಮ್ಮ ಸಂಸಾರ(ಪ್ರಪಂಚ)ವನ್ನಾಗಿ ಮಾಡಿಕೊಳ್ಳುವಂತಹ ಸ್ವತಃ ಹಾಗೂ ಸಹಜಯೋಗಿ ಭವ.

ಬ್ರಾಹ್ಮಣ ಜೀವನದಲ್ಲಿ ಎಲ್ಲಾ ಮಕ್ಕಳ ಪ್ರತಿಜ್ಞೆಯಿದೆ - "ಒಬ್ಬ ತಂದೆಯ ಹೊರತು ಮತ್ತ್ಯಾರೂ ಇಲ್ಲ". ಯಾವಾಗ ಸಂಸಾರವೇ ತಂದೆಯಾಗಿದ್ದಾರೆ, ಇನ್ನೊಬ್ಬರು ಯಾರೂ ಇಲ್ಲವೇ ಇಲ್ಲವೆಂದಾಗ ಸ್ವತಃ ಹಾಗೂ ಸಹಜಯೋಗಿ ಸ್ಥಿತಿಯು ಸದಾಕಾಲವಿರುತ್ತದೆ. ಒಂದುವೇಳೆ ಇನ್ನೊಬ್ಬರೇನಾದರೂ ಇದ್ದಾರೆಂದರೆ, ಇಲ್ಲಿ ಬುದ್ಧಿ ಹೋಗಬಾರದು ಅಲ್ಲಿ ಹೋಗಬಾರದು ಎಂದು ಕಷ್ಟ ಪಡಬೇಕಾಗುತ್ತದೆ. ಆದರೆ ಒಬ್ಬ ತಂದೆಯೇ ಎಲ್ಲವೂ ಆಗಿದ್ದಾರೆಂದಾಗ ಬುದ್ಧಿಯೆಲ್ಲಿಯೂ ಹೋಗಲು ಸಾಧ್ಯವಿಲ್ಲ. ಇಂತಹ ಸಹಜಯೋಗಿ, ಸಹಜ ಸ್ವರಾಜ್ಯ ಅಧಿಕಾರಿ ಆಗಿ ಬಿಡುತ್ತೀರಿ. ಅವರ ಚಹರೆಯಲ್ಲಿ ಆತ್ಮೀಯ ಹೊಳಪು ಏಕರಸ, ಒಂದೇ ರೀತಿಯಿರುತ್ತದೆ.

ಸ್ಲೋಗನ್: ಸ್ಲೋಗನ್: ತಂದೆಯ ಸಮಾನ ಅವ್ಯಕ್ತ ಹಾಗೂ ವಿದೇಹಿಯಾಗುವುದು - ಇದೇ ಅವ್ಯಕ್ತ ಪಾಲನೆಗೆ ಪ್ರತ್ಯಕ್ಷ ಪ್ರಮಾಣ ಆಗಿದೆ.